ದಿ: 25.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು**</u>: ವಾದಿ ಪರ ಶ್ರೀಯುತ ಎಸ್.ಎಸ್. ವಕೀಲರಿಂದ.

ನಾನು ಪಿ.ಯು.ಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ. ನಾನು ಪ್ರಸ್ತುತ ಯಳಚಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನನಗೆ ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ನುಡಿಯುವಂತೆ ಯಾರು ಹೇಳಿರುವುದಿಲ್ಲ ಸಾಕ್ಷಿಯು ಮುಂದುವರೆದು ವಾದಿ ಮತ್ತು ಪ್ರತಿವಾದಿಗಳು ಜಗಳವಾಡುತ್ತಿದ್ದು ಮತ್ತು ಅದನ್ನು ನೋಡಿದ ಮೇರೆಗೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಹೊಸಕೋಟೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ.

2.ನಾನು ಹೊಸಕೋಟೆಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.59-2019 ದಾವೆಯಲ್ಲಿ ಮುನಿಯಮ್ಮ ಮತ್ತು ಇತರರ ಪರವಾಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ರಾಮಸ್ವಾಮಿರವರು ಲಕ್ಷ್ಮಿ ದೇವಮ್ಮ ರವರ ವಿರುದ್ದ ಮನೆ ಕಟ್ಟುವ ಕುರಿತು ದಾವೆ ದಾಖಲಿಸಿರುತ್ತಾರೆ. ಲಕ್ಷ್ಮಿದೇವಿರವರು ರಾಮಸ್ವಾಮಿರವರ ವಿರುದ್ದ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವಂತೆ ನಲ್ಲಪ್ಪರವರು ನಂಜಪ್ಪರವರಿಂದ ಖರೀದಿಸಿದ್ದಾರೆ ಎಂದು ಹೇಳುವ ಉತ್ತರ ದಿಕ್ಕಿನ ಖಾನೇಷುಮಾರಿ ಸಂಖ್ಯೆ 75 ಪೂರ್ವ ಪಶ್ಚಿಮ 25 ಗಜ ಮತ್ತು ಉತ್ತರ ದಕ್ಷಿಣ 8 ಗಜ ಆಸ್ತಿಯ ಕ್ರಯ ಪತ್ರದಂತೆ ನಲ್ಲಪ್ಪ ಮತ್ತು ಅವರ ವಾರಸುದಾರರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ನಂಜಪ್ಪರವರು ನಲ್ಲಪ್ಪರವರಿಗೆ ಮಾರಾಟ ಮಾಡಿದ ಜಮೀನಿನ ಕ್ರಯ ಪತ್ರವನ್ನು ನೋಡಿರುತ್ತೇನೆ ಮತ್ತು ಅದರ ಚಕ್ಕುಬಂದಿಗಳು ತಿಳಿದಿರುತ್ತದೆ. ಸದರಿ ನಲ್ಲಪ್ಪರವರು ಖರೀದಿಸಿದ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಂಜಪ್ಪರವರ ಉಳಿಕೆ ಆಸ್ತಿ, ಉತ್ತರಕ್ಕೆ ಪಟೇಲ್ ಬಸಪ್ಪರವರ ಆಸ್ತಿ ಮತ್ತು ದಕ್ಷಿಣಕ್ಕೆ ನಂಜಪ್ಪ ಮತ್ತು ಗೌರಮ್ಮರವರ ಉಳಿಕೆ ಜಮೀನು ಇರುತ್ತದೆ. ನಾನು 1963 ನೇ ಸಾಲಿನ ಕ್ರಯ ಪತ್ರವನ್ನು ನೋಡಿರುವುದಿಲ್ಲ ಮತ್ತು ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಈಗ ನನಗೆ ತೋರಿಸಿದ ನಿಪಿ.1 ರಲ್ಲಿ ಪಶ್ಚಿಮ ದಿಕ್ಕಿಗೆ ನಿಮ್ಮ ವಠಾರ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ಸದರಿ ನಂಜಪ್ಪರವರು ಪೂರ್ವ ಪಶ್ಚಿಮ 25 ಗಜ ಉತ್ತರ ದಕ್ಷಿಣ 7 ಗಜ ವಿಸ್ತೀರ್ಣದ ಆಸ್ತಿಯನ್ನು ಗೌರಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ನಾನು ೨ನೇ ಪ್ರತಿವಾದಿಯ ಹೆಂಡತಿಯ ಅಣ್ಣನ ಮಗ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 2 ರಲ್ಲಿ ಕಾಣಿಸಿರುವ ಖಾನೇಷುಮಾರಿ ಸಂಖ್ಯೆ 1 , ಜುಂಜರ್ ನಂ.78 ಆಸ್ತಿ ಸಂಖ್ಯೆ 2 ಆಸ್ತಿಯು ಮೂಲತ: ನಂಜಪ್ಪರವರ ಆಸ್ತಿ ಆಗಿರುತ್ತದೆ. ಸದರಿ ಖಾನೇಷುಮಾರಿ ಸಂಖ್ಯೆ 1 , ಜುಂಜರ್ ನಂ.78 ಆಸ್ತಿ ಸಂಖ್ಯೆ 2 ಆಸ್ತಿ ನಂಜಪ್ಪರವರು ಖರೀದಿಸಿದ ಆಸ್ತಿ ಆಗಿರುತ್ತದೆ. ಸದರಿ ನಂಜಪ್ಪರವರು ಖರೀದಿಸಿದ್ದಾರೆ ಎಂದು ಹೇಳುವ ಖಾನೇಷುಮಾರಿ ಸಂಖ್ಯೆ 1 , ಜುಂಜರ್ ನಂ.78 ಆಸ್ತಿ ಸಂಖ್ಯೆ 2 ಆಸ್ತಿಯ ಕ್ರಯ ಪತ್ರವನ್ನು ನೋಡಿರುವುದಿಲ್ಲ. ಸದರಿ ಖಾನೇಷುಮಾರಿ ಸಂಖ್ಯೆ 1 , ಜುಂಜರ್ ನಂ.78 ಆಸ್ತಿ ಸಂಖ್ಯೆ 2 ಆಸ್ತಿಯ ಚಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ಪೂರ್ವಕ್ಕೆ ಪಟೇಲ್ ಬಸ್ಸಪ್ಪ ಮತ್ತು ನಲ್ಲಪ್ಪರವರ ಆಸ್ತಿ, ಪಶ್ಚಿಮಕ್ಕೆ ಮಿಟ್ಲಪ್ಪರವರ ಆಸ್ತಿ, ಉತ್ತರಕ್ಕೆ ನಲ್ಲಪ್ಪರವರ ಆಸ್ತಿ ಮತ್ತು ದಕ್ಷಿಣಕ್ಕೆ ಹರೀಶ್ ಮತ್ತು ವಿಜಯ ಕುಮಾರ್ ರವರ ಆಸ್ತಿ ಇರುತ್ತದೆ.

4. ಲಕ್ಷ್ಮಿ ದೇವಿ ಮತ್ತು ಅವರ ಕುಟುಂಬದವರು ಮೂಲ ದಾವೆ ಸಂಖ್ಯೆ 440-2015 ದಾವೆಯಲ್ಲಿನ ರಾಜಿಯಂತೆ ಸ್ವಾಧೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ನಿಪಿ.7 ಛಾಯಾಚಿತ್ರದಲ್ಲಿ ಕಾಣುತ್ತಿರುವ ಜಾಗದಲ್ಲಿ ವಾದಿಯು ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿಡಿ.55ರಲ್ಲಿರುವ ಹಾಲೋ ಬ್ರಿಕ್ಸ್ ನಿಂದ ಕಟ್ಟಿರುವ ಅಪೂರ್ಣವಾದ ಕಟ್ಟಡ ವಾದಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿ.ಡಿ.51 ಛಾಯಾಚಿತ್ರದಲ್ಲಿ ವಾದಿಯ ಮನೆಯ ಉತ್ತರದ ದಿಕ್ಕಿನಲ್ಲಿರುವ ಕಾಂಪೌಂಡ್ ಗೋಡೆಯ ಒಳಗೆ ಮನೆಯನ್ನು ನಿರ್ಮಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ ೨ ರಲ್ಲಿ ಕಾಣಿಸಿರುವ ಖಾನೇಷುಮಾರಿ ಸಂಖ್ಯೆ 1 ಆಸ್ತಿಯ ವಿಸ್ತೀರ್ಣದ ಕುರಿತು ಕ್ರಯ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ೨ನೇ ಪ್ರತಿವಾದಿಯ ಹೆಂಡತಿಯ ಅಣ್ಣನ ಮಗನಾದ ಮೇರೆಗೆ ೧ನೇ ಪ್ರತಿವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 50-60 ವರ್ಷಗಳ ಹಿಂದೆ ನಂಜಪ್ಪರವರು ದಾವಾ ಆಸ್ತಿಯನ್ನು ನಲ್ಲಪ್ಪರವರಿಗೆ ಮಾರಾಟ ಮಾಡಿದ್ದು ಮತ್ತು ಸದರಿ ವಿಚಾರಣ ನನಗೆ ತಿಳಿಯದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂಜಪ್ಪರವರು ನಲ್ಲಪ್ಪ ರವರಿಗೆ ಮಾರಾಟ ಮಾಡಿದ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪಶ್ಚಿಮ ದಿಕ್ಕಿಗೆ ಖಾನೇಷುಮಾರಿ ಸಂಖ್ಯೆ 64 ಆಸ್ತಿ ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.